**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ. 2422/2025**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಜ್ಞಾನೇಶ | ಸಿ.ಡಬ್ಲ್ಯೂ-02 |
| ತಂದೆಯ ಹೆಸರು | : | ಜಯಣ್ಣ | ಪಿ.ಡಬ್ಲ್ಯೂ-02 |
| ವಯಸ್ಸು | : | 18 ವರ್ಷ | |
| ಉದ್ಯೋಗ | : | ವಿದ್ಯಾರ್ಥಿ | |
| ವಾಸಸ್ಥಳ | : | ಹುಲಿಕುಂಟೆ ಗ್ರಾಮ | ದಿಃ 04-02-2026. |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

ಸಾಕ್ಷಿಗೆ ನಿಪಿ.2 ಅನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿಃ 2(ಬಿ) ಅಂತ ಗುರುತಿಸಲಾಯಿತು. ನಿಪಿ.2 ಕ್ಕೆ ದಿನಾಂಕ 18.08.2025 ರಂದು ಚಳ್ಳಕೆರೆ ಸರ್ಕಾರಿ ಆಸ್ಪತ್ರೆಯ ಬಳಿ ಬೈಕ್ ಕಳ್ಳತನವಾದ ವಿಚಾರವಾಗಿ ಮಹಜರ್ ಕ್ರಮ ಜರುಗಿಸಿದಾಗ ಸಹಿ ಮಾಡಿರುತ್ತೇನೆ. ನನ್ನ ಜೊತೆ ಚಾಸಾ-1 ಮತ್ತು ಚಾಸಾ-3 ರವರು ಹಾಜರಿದ್ದು ಚಾಸಾ-1 ರವರು ಸ್ಥಳ ತೋರಿಸಿರುತ್ತಾರೆ. ಮಹಜರನ್ನು ಮಧ್ಯಾಹ್ನ 02-30 ರಿಂದ 03-00 ಗಂಟೆವರೆಗೆ ಜರುಗಿಸಲಾಗಿರುತ್ತದೆ. ಮಹಜರ್ ಸಮಯದಲ್ಲಿ ನಿಪಿ.2 ಕ್ಕೆ ಸಹಿ ಮಾಡಿರುತ್ತೇನೆ. ಭಾವಚಿತ್ರವನ್ನು ತೆಗೆಸಿರುತ್ತಾರೆ. ಸಾಕ್ಷಿ ನಿಪಿ.3 ರ ಭಾವಚಿತ್ರವನ್ನು ನೋಡಿ ಮಹಜರ್ ಸಮಯದಲ್ಲಿ ತೆಗೆದ ಭಾವಚಿತ್ರ ಎಂದು ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಟಿ.ಎಸ್.ಎಂ., ಆರೋಪಿ ಪರ ವಕೀಲರಿಂದಃ**

ಮಹಜರ್ ಗೆ ಹಾಜರಾಗಲು ಪೊಲೀಸರು ನನಗೆ ನೋಟೀಸ್ ನೀಡಿರುವುದಿಲ್ಲ, ನನ್ನನ್ನು ಪೊಲೀಸರು ಸ್ಥಳಕ್ಕೆ ಕರೆದುಕೊಂಡು ಬಂದಿರುತ್ತಾರೆ. ನಾನು ಮತ್ತು ಚಾಸಾ-3 ರವರು ಚಾಸಾ-1 ರವರ ಮಿಲ್ ನಲ್ಲಿ ಕೆಲಸ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಚಾಸಾ-1 ರವರ ಬೈಕ್ ನಂಬರ್ ಹೇಳಲು ನೆನಪಿಲ್ಲ. ಮಹಜರ್ ಮಾಡಿದ ಸ್ಥಳದ ಚಕ್ಕುಬಂದಿ ಹೇಳಲು ಆಗುವುದಿಲ್ಲ. ನಿಪಿ.2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಪೊಲೀಸರು ಹೇಳಿದ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ.3 ನ್ನು ಮಹಜರ್ ಸಮಯದಲ್ಲಿ ತೆಗೆಯಲಾಗಿರುತ್ತದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ